# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.542/2023

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪ್ರಭು | ಸಿಡಬ್ಲ್ಯೂ-8 |
| ತಂದೆಯ ಹೆಸರು | - | ತಿಪ್ಪೇಸ್ವಾಮಿ | ಪಿಡಬ್ಲ್ಯೂ-5 |
| ವಯಸ್ಸು | - | 29 ವರ್ಷ | |
| ಉದ್ಯೋಗ | - | ಗಾರೆ ಕೆಲಸ | |
| ವಾಸ | - | ಹಿರೇಕಬ್ಬಿಗೆರೆ ಗ್ರಾಮ | |

**ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ಚಾಸಾ.1 ನನಗೆ ಗೊತ್ತಿಲ್ಲ. ಚಾಸಾ.9 ರಿಂದ 12 ರವರು ನನಗೆ ಗೊತ್ತಿಲ್ಲ. ಆರೋಪಿ ಗೊತ್ತಿಲ್ಲ. ಮೃತ ಶ್ರೀಧರ ನನಗೆ ಗೊತ್ತಿಲ್ಲ. ಅವರು ಯಾವ ರೀತಿ ಮೃತ ಪಟ್ಟರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

09.02.2023 ರಂದು ಸುಮಾರು 4.15 ರ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತ ದೇವರಾಜ, ಶ್ರೀಧರ , ಶಾರುಕ್ ಬೈಕ್ ನಲ್ಲಿ ಹಿರಿಯೂರು ತಾ. ವಿ ವಿ ಪುರ ಕ್ಯಾಮ್ ನೋಡಿಕೊಂಡು ಬರಲು ಹೋಗಿದ್ದು ನಾನು ಮತ್ತು ದೇವರಾಜ್ ಒಂದು ಬೈಕ್ ನಲ್ಲಿ ಶ್ರೀಧರ ಇನ್ನೊಂದು ಕೆಎ 16 ಇಪಿ 4245 ಬೈಕ್ ನಲ್ಲಿ ಶಾರುಕ್ ಇನ್ನೊಂದು ಬೈಕ್ ನಲ್ಲಿದ್ದು ವಾಪಸ್ಸು ಡ್ಯಾಮ್ ನೋಡಿ ಕೊಂಡು ಚಿತ್ರದುರ್ಗಕ್ಕೆ ಹೊರಟಾಗ ಶ್ರೀಧರ ಮುಂದೆ ಹೋಗುತ್ತಿದ್ದಾಗ

ಯಾವುದೋ ಒಂದು ಕಾರು ಇದ್ದಕ್ಕಿಂದ್ದಂತೆ ಬ್ರೇಕ್ ಹಾಕಿದ್ದು ಇದ್ದಕ್ಕಿದ್ದಂತೆ ಬಿದ್ದು ಆತನ ಹಿಂದೆ ಇದ್ದ ಕೆಎ 17 ಎಸ್ 9989 ಮೋಟರ್ ಸೈಕಲ್ ನಲ್ಲಿ ಬರುತ್ತಿದ್ದ ದೇವರಾಜ್ ಮೋಟರ್ ಸೈಕಲನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಶ್ರೀಧರ್ ಗ ಡಿಕ್ಕಿ ಪಡಿಸಿದ ಪರಿಣಾಮ ಅವರ ತಲೆಗೆ ಮತ್ತು ಕೈಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದಿದ್ದವು ಎಂದರೆ ಸರಿಯಲ್ಲ. ಶ್ರೀಧರ್ ಮೃತ ಪಟ್ಟರು ಎಂದರೆ ಸರಿಯಲ್ಲ. ಅಪಘಾತ ಆರೋಪಿ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿನಿದ್ದರಿಂದ ಹೇಳಿಕೆ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ ಆರ್ ಆರ್ ವಕೀಲರಿಂದ-ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು